ಮಂತ್ರ ತಂತ್ರಕ್ಕೆ ಇನ್ಯಾವೂ ಹತ್ತಿರ ಸುಳಿಯಲಿಲ್ಲ. ಅಷ್ಟೊತ್ತಿಗೆ ಅಲರ್ಟ್ ಆದವೇನೊ.

ರಂಗಯ್ಯ 'ಇವ್ರ ಸಾಕ್ತೋಳ್ತಾಕ್ತಾಯ' ಎಂದು ಮಂತ್ರ ಎತ್ತಿಟ್ಟು ಕೊಣಬೇವಿನ ಮರಕ್ಕೆ ಬರುವವಕ್ಕಾಗಿ ನೋಡತೊಡಗಿದ. ಸಂಜೆ ಮುಂಚೆ ಗಾಸಿ ಆಗಿದ್ದಕ್ಕೋ ಏನೊ ಯಾವ ಕೋಳಿಗಳು ಇತ್ತ ತಲೆ ಹಾಕಲೇ ಇಲ್ಲ. ರಂಗಯ್ಯ ದನ ಪನ ಕಟ್ಟಿ ಬಂದು ರಾತ್ರಿ ಏಳರ ಸುಮಾರಿಗೆ ಅಂಡಬಂಡನಿಗಾಗಿ ಕೊಣಬೇವಿನ ಮರ ನೋಡಿದ. ಅಲ್ಲಿ ಅವನೊಬ್ಬನನ್ನು ಬಿಟ್ಟು ಉಳಿದ ಯಾಟೆ ಪಾವುಗೋಳಿಗಳು ಕೊಂಬೆ ಏರಿದ್ದವು. ಬಡ್ಡಿ ಮಗುಂದು ಇಷ್ಟೊತ್ತಾದ್ರು ಬಂದಿಲ್ವಲ್ಲ ಎಂದುಕೊಳ್ಳುವಷ್ಟರಲ್ಲೆ ಅತ್ತ ಕಡೆ ಕಕ್ಕಕ್ಕ ಎನ್ನುತ್ತಿರುವ ರಂಗಮ್ಮನ ದನಿ ಕೇಳಿತು. ಅದೇನು ಎಂದು ನೋಡಿದಾಗ ಅಂಡ ಬಂಡ ಇಂದು ಮನೆಯನ್ನೇ ಸೇರದೆ ಇನ್ಯಾರದೋ ಮನೆಯ ಹಿತ್ತಲಿನಲ್ಲಿದ್ದ ತೆಂಗಿನ ಮರ ಏರಿ ಕುಳಿತಿತ್ತು. ಅಷ್ಟೊತ್ನಲ್ಲಿ ಆ ತೆಂಗಿನ ಮರ ಏರಿ ಕೋಳಿಹಿಡಿಯುವುದು ಆಗದ ಮಾತು ಎಂದು ರಂಗಯ್ಯ, 'ಬಾ ಅತ್ತಗೆ ಇದ್ರಗೆ ಯಾವ್ದಾರ ಒಂದ ಹಿಡ್ಕಣನ' ಎಂದು ಹೆಂಡ್ತಿನ ಕರೆದ. ಕೊಣಬೇವಿನ ಮರದಲ್ಲಿ ರಂಗಯ್ಯನ ಕೈಗೆ ಸಿಕ್ಕಿ ಕೊರಗುಟ್ಟುತ್ತಿದ್ದ ಕೋಳಿ ಶಬ್ದ ಕೇಳಿದ ನಂತರವೇ ಕರಿಯಪ್ಪನವರಲ್ಲಿದ್ದ ಆತಂಕ ಕಡಿಮೆಯಾದುದು.

ಇನ್ನ ಬೆಳಗ್ಗೆ ಕರಿಯಪ್ಪನವರು ಹೊತ್ತುಟ್ಟ ಮುನ್ನ ಎದ್ದು ಕೈಕಾಲು ಮುಖ ತೊಕಂಡು 'ಬತ್ತಿನಿ ಕಣ್ರವ್ವ' ಎಂದು ಹೊರಟು ಈಚೆಕೆ ಬಂದಾಗ ಅದೇ ಅಂಡಬಂಡ ರೆಕ್ಕೆ ಬಿಚ್ಚಿ ಮೈಮುರಿಯುತ್ತ ಮನೆ ಮುಂದೆ ನಿಂತಿತ್ತು. ಕರಿಯಪ್ಪನವರು ಅದನ್ನ ನೋಡಿಕೊಂಡು 'ಮದ್ವೆ ಎಲ್ಲ ಮುಗೀಲಿ, ಬಂದು ಬಿಡ್ತಿನಿ' ಎಂದು ಹೇಳಿ ಮುಂದಡಿ ಇಟ್ಟರು. 'ನಿಮ್ಮಾವ ಹೇಳಿರೆ ಹೇಳುತ್ತೆ ತಗ, ನಾಡಿದ್ದು ಶುಕ್ರಾರ ಹೆಂಗಿದ್ರು. ಹೋದ್ವಾರ ವಾರ ಬಿಟ್ಟಿದಿವಿ, ದುರ್ಗಮ್ಮುಂಗೆ ಎಡೆ ಮಾಡಿ ಇಕ್ಕಿರೆ ಆಗುತ್ತೆ' ಅಂತ ಗಂಡನ ಮಕ ನೋಡಿಕೊಂಡು ರಂಗಮ್ಮ ಅಂದಳು.

ಅದರಂತೆ ಶುಕ್ರಾರ ಬಂತು. ಪಕ್ಡೂರಿಗೆ ಕೊಟ್ಟಿದ್ದ ಮಗಳು ಅಳಿಯುಂಗೆ 'ಬರ್ರಪ್ಪ ಒಂದು ಹುಂಜೈತೆ ದುರ್ಗಮ್ಮುಂಗೆ ಮಾಡನ' ಅಂತ ಫೋನ್ ಮಾಡಿ ಹೇಳಿದ್ರು. ಮಂಗ್ಳಾರ ಬೆಳಗ್ಗೆ ಹಿಡಿಯಕೋದ್ರೆ ಅಷ್ಟೊತ್ತಿಗೆ ಅದೆಲ್ಲಿ ನೆಗೆದೋಗಿರುತ್ತೊ, ಇವತ್ತು ಸಾಯಂಕಾಲನೆ ಹಿಡುದು ಕವುಚಾಕನ ಎಂದು ಗಂಡಹೆಂಡ್ತಿ ಹೋಗಿ ಮರುದ್ಯಾಕೆ ಕತ್ತೆತ್ತಿರು. ಅಲ್ಲಿ ಅಂಡ ಬಂಡ ಹುಂಜವೆ ಇಲ್ಲ. ಇದೆಲ್ಲೋತು ಅಂತ ರಂಗಮ್ಮ ಅಷ್ಟೊತ್ನಲ್ಲಿ ಊರೆಲ್ಲ ಹುಡುಕತೊಡಗಿದಳು. ಅವಳ ತಲೆಯಲ್ಲಿ ಯಾವಾರ ತಲೆ ಮಾಸ್ದವು ಹಿಡ್ಕಂಡು ತಿಂದ್ಬುಟ್ವ ಎಂಬುದು ಓಡುತ್ತಿತ್ತು. ಅದಕ್ಕಾಗಿ ಮಧ್ಯೆ ಮಧ್ಯೆ 'ಯಂಥ ಒಳ್ಳೆ ಉಂಜ್ನವ್ವ, ದುರ್ಗಮ್ಮುಂಗೆ ಬಿಟ್ಟಿದ್ವು, ಯಾವಾಗ್ಲು ಇಲ್ಲೆ ಕಣ್ಮುಂದೆ ಇರದು, ಕಾಲ್ ಕಾಲ್ಗೆ ಬರದು, ಇವತ್ತಿಲ್ಲ ಅಂದ್ರೆ ಏನಾಗಿರ್ಬೇಕು, ತಿಂದರು ಬದುಕ್ತರ, ರಕ್ತ ಬೇಧಿ ಆಗಿ ಹೊತ್ಕಂಡು ಹೋಗಲ್ವ' ಎಂದು ದನಿ ಅದುರಾಡಿಸುತ್ತಿದ್ದಳು. ಇದನ್ನು ಕೇಳಿಸ್ಕಂಡ ಪಕ್ಕದ ಬೀದಿಯ ಅಮ್ಮಯ್ಯ 'ಯಕ್ಕಾ ಕೋಳಿ ಹುಡುಕ್ತಿದಿಯ, ಇಲ್ಲೊಂದು ಯಾವ್ದೊ ಕುಂತೈತೆ ನೋಡು' ಎಂದು ತಮ್ಮನೆ ಹಿತ್ಲಲ್ಲಿದ್ದ ಸೀಬಿಗಿಡದ ಕಡೆಕೆ ತೋರ್ಸಿಳು. ರಂಗಮ್ಮ ಗುಂಡಿ ಇಳಿದೋಗಿ ನೋಡಿ ಕತ್ಲೆ ಆದ್ದರಿಂದ ಗಂಡುನ್ನ ಕರುದ್ಲು. ಹಿಂದೆ ಬಂದ ರಂಗಯ್ಯ ಮರುದ್ಯಾಕೆ ಬ್ಯಾಟರಿ ಬಿಟ್ಟು ನೋಡಿ 'ಹು ನಮ್ದೆಯ ನೋಡು, ಇಲ್ಲಿಗೆ ಬಂದು ಪಾಟ್ವಾಗೈತೆ' ಅಂದ. 'ನೆನ್ನೆಸ್ಲಿಂದ ಇಲ್ಲೆ ಕುಂತೈತೆ, ನಾನು ಇದ್ಯಾರ್ದೊ ಕಾಣೆ ಅಂದ್ಕಂಡು ಸುಮ್ನಾಗಿದ್ದೆ' ಅಂದ್ಲು. ಸೀಬೆ ಮರದ ತುದಿಲೋಗಿ ಕೂತಿದ್ದ ಹುಂಜನ್ನ ನೋಡಿದ ರಂಗಯ್ಯ ಇದುನ್ನು ಹಿಡಿಯ ಸಾಹಸ ಈಗ ಈಡೇರಲ್ಲ ಎಂದು ಮನಗಂಡು ಬೆಳಿಗ್ಗೆ ಮಾಮೂಲಿ ಮಂತ್ರ ಒಡ್ಡಿ ಹಿಡುದಾಕನ ಎಂದು ತೀರ್ಮಾನಿಸಿ ಮನಿಗೆ ಬಂದು ಮನಿಕಂಡ.

ರಂಗಯ್ಯ ಬೆಳಗ್ಗೆದ್ದು ಮಾಡಬೇಕಾದ ಗನಂದಾರಿ ಕೆಲಸ ಕೋಳಿ ಹಿಡಿಯುವುದೇ ಆಗಿತ್ತು. ಅದಕ್ಕಾಗಿ ಎದ್ದ ತಕ್ಷಣವೇ ಅದರ ಮುಖ ದರ್ಶನ ಪಡೆದು ಮನಸ್ಸಲ್ಲೆ ಎಜೆಪ್ ಹಾಕಿಕೊಂಡು ತಿರುಗಾಡುತ್ತಿದ್ದ. ಕಸ ಮುಸ್ರೆ, ಹಾಲು ನೀರು ಎಲ್ಲ ಮುಗ್ಸಿ ಮಾಮೂಲಿನಂತೆ ಮನೆ ಮುಂದೆ ಮಂತ್ರ ಒಡ್ಡಿ ಅದರ ಆಗಮನಕ್ಕಾಗಿ ಕಾದು ಕುಳಿತ. ರಂಗಮ್ಮ ಊರೂರು ತಿರುಗಿ ಅದು ಇದ್ದೆಡೆಯಿಂದ ಗಾಬರಿಗೊಳಿಸಿ ಮನೆಕಡಿಕೆ ಓಡಿಸಿಕೊಂಡು ಬಂದಳು.

ಅಂಡಬಂಡ ಹುಂಜ ಮನೆಕಡೆ ಬಂದನಾದರೂ ಆತನೊಬ್ಬನೆ ಬರದೆ ಅವನೊಂದಿಗೆ ಇನ್ನೊಬ್ಬನನ್ನೂ ಕರೆತಂದಿದ್ದ. ಅಂಡ ಬಂಡನ ಗೆಳೆಯ ಇವನಷ್ಟೆ ಸೈಜಿನವನಾದರೂ ಬಣ್ಣದಲ್ಲಿ ಕರ್‍ರಗಿದ್ದ. ರಂಗಮ್ಮ ಓಡಿಸಿದಂತೆಲ್ಲ ಅವನು ಎತ್ತಕಡೆಗೋಗುತ್ತಾನೋ ಇವನೂ ಅತ್ತಕಡೆಗೇ ಹೋಗುತ್ತಿದ್ದನು. ಇವನು ಇತ್ತಕಡೆ ಬಂದರೆ ಅವನೂ ಇತ್ತಗೇ ಬರುವನು. ಅಂಗಾಡಿ ಇಂಗಾಡಿ ಇಬ್ಬರೂ ರಂಗಯ್ಯನೊಡ್ಡಿದ್ದ ಮಂತ್ರಿಕಡೆಗೇ ಬಂದರು. ಹುಷಾರಿಯಾದ ಅಂಡಬಂಡ ಗೆಳೆಯನಿಗೆ ಹೇಳಿದ್ದನೋ ಬಿಟ್ಟಿದ್ದನೋ, ಮಂತ್ರಿಯೊಳಗೆ ಬಂದು ಮೊದಲು ಬಿದ್ದವನು ಕರ್‍ರನೆಯ ಗೆಳೆಯನೆ. ಇವನು ಮಾಮೂಲಿನಂತೆ ನೆಗೆದೋಗಿ ಅನತಿ ದೂರದಲ್ಲಿ ಕತ್ತೆತ್ತಿ ಕೆಕ್ಕರಿಸಿಕೊಂಡು ನೋಡುತ್ತಿದ್ದ. ರಂಗಯ್ಯನ ಸಮಾಧಾನಕ್ಕೆ ಒಂದೆರೆಡು ಪುಕ್ಕವನ್ನಷ್ಟೇ ಉದುರಿಸಿಹೋಗಿದ್ದ. ರೊಚ್ಚಿಗೆದ್ದ ರಂಗಯ್ಯ ಮಂತ್ರಿಗೆ ಬಿದ್ದಿರುವ ಕರೆಕೋಳಿಯನ್ನ ಬಿಟ್ಬೋಡಿಸುವುದು ಬೇಡ, ಇವನನ್ನು ಹುಡುಕಿಕೊಂಡು ಅವನು ಬಂದೇ ಬತ್ತಾನೆ ಎಂದು ಅದನ್ನ ಇನ್ನೊಂದು ಮಂತ್ರಿಗಾಕಿ ಕೌಚಿ ಮತ್ತೆ ಮಂತ್ರ ಒಡ್ಡಿ ಕಾಯತೊಡಗಿದ. ಎಲ್ಲೋದ್ನೊ ಈ ಹುಂಜ ಮತ್ತೆ ಇತ್ತ ತಲೆ ಹಾಕಲೇಬಾರದ!

ಇತ್ತ ಕಡೆ ರಂಗಮ್ಮನಿಗೆ ದುರ್ಗಮ್ಮುನ್ನ ಮಾಡ ಚಿಂತೆ. ಎಲ್ಲ ತೊಳ್ಕಂಡು ಬಳ್ಕಂಡು ರೆಡಿ ಮಾಡ್ಕಂಡವ್ಳೆ. ಬಲಿಗೆ ಹುಂಜವೆ ಇಲ್ಲ. ಮಗಳಿಗು ಅಳಿಯಂಗು ಹೇಳ್ಕಂಡವ್ಳೆ ಬೇರೆ! ಸಂಜಾಗ್ತ ಬಂತು ಆಕಡೆಯಿಂದ ದುರ್ಗಮ್ಮುನ್ನ ಮೈಮೇಲೊತ್ತವಳಂತೆ ಶಿವಮ್ಮ 'ಯಾವಳೆ ಅವ್ಳು ನನ್ಕೋಳಿ ಹಿಡ್ಕಂಡು ಕವ್ಚಿಕೊಂಡಿರಳು, ಇವ್ಳು ದೇವ್ರ ಮಾಡದಾದ್ರೆ ಇವ್ಳುದ್ನ ಹಿಡ್ಕಂಡು ಕುಯ್ಕಂಬೇಕು, ಕಂಡರವ ಹಿಡ್ಕಂಡು ಕವ್ಚ್ಕೊಂಡ್ರೆ ಬಿಡ್ತಿವ, ಹಿಂಗೆ ಎಷ್ಟು ಕೋಳಿ ಮುಕ್ಕಂಡು ತಿಂದವ್ಳು, ನನ್ಕೊಲೆಶ್ಯಾಲೆ' ಎಂದು ಬಂದಳು. ಈ ಅಂಡಬಂಡ ಹೋಗಿ ಹೋಗಿ ಆ ಶಿವಮ್ಮನ ಮನೆ ಹುಂಜುನ ಗೆಳತನ ಮಾಡಿತ್ತು. ಈ ಶಿವಮ್ಮ ರಂಗಮ್ಮ ಆಗಿಂದಾಗ್ಗೆ ಹಾವು ಮುಂಗ್ಸಿ ಆಗದು ಹಿಂದಿನಿಂದಲೂ ನೆಡ್ಕಂಡು ಬಂದಿತ್ತು. ಇದುಕ್ಕೆ ಬೇರೆಲ್ಲಾ ಕಾರಣಗಳಿದ್ದರೂ ಇತ್ತೀಚೆಗೆ ರಂಗಮ್ಮನ ಅಂಡಬಂಡ ಹುಂಜುನ ಪ್ರತಾಪವೇ ಮುಖ್ಯದ್ದಾಗಿತ್ತು. ರಂಗಮ್ಮನ ಅಂಡಬಂಡ ಹುಂಜನ ನೆತ್ತಿ ಜುಟ್ಟು ಒಂಚೂರು ಮುಕ್ಕಾಗಿತ್ತು. ಈ ಮುಕ್ಕಿನ ಅಂದ ತನ್ನಿಂತಾನಾಗೆ ಮಾಡಿಕೊಂಡಿದ್ದಲ್ಲ. ಇದರ ಅಪ್ಪನೆನಿಸಿಕೊಂಡಿದ್ದ ಅಂಡಬಂಡನಿಗೂ ಇದೇ ರೀತಿ ಜುಟ್ಟಿನ ಮುಕ್ಕಿದ್ದು ಅಲ್ಲಿಂದಲೇ ಬಳುವಳಿಯಾಗಿ ಇವನಿಗೂ ಬಂದಿತ್ತು. ಈ ರಂಗಮ್ಮನ ಅಂಡಬಂಡ ಕೇರಿಗೆಲ್ಲ ಒಬ್ಬನೇ ಮದನ ಕಾಮರಾಜನಂತೆ ಜಂಬದಿಂದ ವರ್ತಿಸುತ್ತಿದ್ದ. ಯಾಟೆಗಳು ಅದೆಷ್ಟೇ ದೂರ ತಪ್ಪಿಸಿಕೊಂಡು ಓಡಿದರೂ ಹಟ್ಟಿಸಿಕೊಂಡು ಹೋಗಿ ಮೇಲೆರಗಿ ಕುಕ್ಕುತ್ತಿದ್ದ. ಪರಿಣಾಮವಾಗಿ ಕೇರಿಯ ಎಲ್ಲರ ಮನೆಯ ಯಾಟೆಗಳೂ ವರ್ಷೊಂಬತ್ತು ಕಾಲ ಕಾವಿಗೆ ಕೂತೇ ಇರುತ್ತಿದ್ದವು. ಅವುಗಳ ಮರಿಗಳು ದೊಡ್ಡವಾದಂತೆಲ್ಲ ಮುಕ್ಕಾದ ಜುಟ್ಟನ್ನೇ ಹೊತ್ತು ಬೆಳೆಯುತ್ತಿದ್ದವು. ಇದರಿಂದಾಗಿ ಕೇರಿಯ ಇದ್ದ ಬದ್ದ ಕೋಳಿಗಳೆಲ್ಲ ಯಾಟೆಯಾದರೆ ಅಂಡಬಂಡನ ಬಣ್ಣ ಹುಂಜವಾದರೆ ಮುಕ್ಕಾದ ಜುಟ್ಟನ್ನೇ ಹೊತ್ತು ತಿರುಗುತ್ತಿದ್ದವು. ಈ ಐಬು ವಂಶವಾಹಿಯಿಂದ ಏನಾದರೂ ಮಾಡಿ ತಪ್ಪಿಸಬೇಕೆಂದು ಹಟ್ಟಿಯ ಜನ ಈ ಹುಂಜನನ್ನು ಕಂಡರೆ ಬಾಯಿ ಮಾಡಿ ಓಡಿಸುತ್ತಿದ್ದರು. ತಮ್ಮ ಯಾಟೆಗಳನ್ನು ತಮ್ಮ ಸುಪರ್ದಿನಲ್ಲಿ ಇಟ್ಟುಕೊಳ್ಳಲು ಇನ್ನಿಲ್ಲದಂತೆ ಯತ್ನಿಸುತ್ತಿದ್ದರು. ಆದರೆ ಇನ್ಯಾವುದೋ ಮಾಯದಲ್ಲಿ ಇವು ಅವೇ ಆಗಿರುತ್ತಿದ್ದವು. ಇದನ್ನ ಚಾಲೆಂಜ್ ಆಗಿ ತೆಗೆದುಕೊಂಡಿದ್ದ ಶಿವಮ್ಮ ಮಾತ್ರ ನನಗೆ ಆಗದವಳ ವಂಶವಾಹಿ ನಮ್ಮನೆಯಲ್ಲಿ ಬೆಳೆಯಕೂಡದೆಂದು ತೀರ್ಮಾನಿಸಿ ಅದಕ್ಕಾಗಿ ತನ್ನ ತವರಿನಿಂದ ಈ ಕರೆ ಬಣ್ಣದ ಹುಂಜನನ್ನು ತಂದು ಊರೆಲ್ಲ ಮೆರೆಸುತ್ತಿದ್ದಳು.

ಇಂಥ ಆಗಿಂದಾಗ್ಗೆ ಶತ್ರು ರಂಗಮ್ಮನ ಹುಂಜದ ಗೆಳೆತನ ಮಾಡಿದ್ದ ಶಿವಮ್ಮನ ಹುಂಜ ಇಂದು ತಿಳಿದೊ ತಿಳಿಯದೆಯೋ ರಂಗಯ್ಯನಿಂದ ಕವುಚಲ್ಪಟ್ಟು ಮೂರನೇ ಮಹಾಯುದ್ಧಕ್ಕೆ ಕಾರಣವಾಗಿತ್ತು. ರಂಗಮ್ಮ 'ಅವ್ಳು ಅಂದಂಗೆಲ್ಲ ಅನ್ನಿಸ್ಕಣಕಾಗುತ್ತ' ಎಂದು ಭಾನುಕ್ಕೆ ತಮ್ಮ ಮಿದಿತಿದ್ದುದ ಬಿಟ್ಟು ಬಂದು, 'ಅಂತಳಾದ್ರೆ ನಿನ್ಕೋಳಿನ ಹಿಡಿದು ಕವ್ಚಿಕಳಮ್ಮಿ' ಅಂತ ಜಗಳುಕ್ಕೆ ನಿಂತಿದ್ಲು. ಈ ನಡುವೆ ರಂಗಯ್ಯ ಕವುಚಿದ್ದ ಹುಂಜವನ್ನು ಬಿಡೋದರ ಮೂಲಕ ಯುದ್ಧಕ್ಕೆ ಅಲ್ಪವಿರಾಮ ಸಿಕ್ಕಿತಾದರೂ ಅವರವರ ಮನೆಗಳಲ್ಲಿ ಇದು ಮುಂದುವರೆದೇ ಇತ್ತು.

ಸಂಜೆ ಮಾಡಿಕೊಂಡು ಅಳಿಯ ಮಗಳು ಭಾನುಕ್ಕೆ ಬಂದೇ ಬಿಟ್ಟರಾದ್ದರಿಂದ ಇನ್ನೆರೆಡು